ಹೇಳಿದ್ದೇನೆ. ಇನ್ನು 39 'ಬ' ಘಾರಂ- ಇದು ಮೂವ್‌ಮೆಂಟ್‌ಗೋಸ್ಕರ ಇರತಕ್ಕಂಥ ಒಂದು ಘಾರಂ ಆಗಿರುತ್ತದೆ. ಈ ಘಾರಂ ಇರುವುದರಿಂದ - ' ನಮಗೆ ತೊಂದರೆಯಾಗುತ್ತದೆ, ಅಧಿಕಾರಿಗಳಿಗೆ ಕಿರುಕುಳ ಆಗುತ್ತದೆ' ಅನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಈ ಎರಡೂ ವಿಚಾರಗಳನ್ನು ಸಹಿತ ನಾನು ಪರಿಶೀಲನೆ ಮಾಡುತ್ತೇನೆ. 11-11-98ಕ್ಕೆ ಕಾಫಿ ಬೆಳೆ ಎಪಿಎಂಸಿಗೆ ಒಳಪಡುತ್ತದೆ ಎಂದು ಆದೇಶ ಹೊರಡಿಸಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ಬಹುಶಃ ಯಾವ ಕಾರಣಕ್ಕೋಸ್ಕರ ಮಾಡಿದ್ದಾರೋ ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿ ನಂತರ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, ಕಾಫಿ ಸಂಸ್ಕರಣ ಮಾಡುವ ಸಲುವಾಗಿ ಪರಿಸರ ಇಲಾಖೆಯವರು ಒಂದು ಘಾರಂನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ, ಮತ್ತು ಅದರಂತೆ ನಡೆದುಕೊಳ್ಳಲೂ ಸಾಧ್ಯವಿಲ್ಲ. ಲೈನೆನ್ಸ್ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ನಮ್ಮ ತಕರಾರು ಇಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಸಂಬಂಧಪಟ್ಟವರಿಗೆ ಸರಿಪಡಿಸುವುದಕ್ಕೆ ಹೇಳುತ್ತೇನೆ.

(ಉ) ಕರ್ನಾಟಕ ಸಣ್ಣಕೈಗಾರಿಕೆ ಮಾರುಕಟ್ಟೆ ನಿಗಮದ ಮೂಲಕ ಪರಿಶಿಷ್ಟ ಜಾತಿ: ಪಂಗಡಗಳ ಅಭಿವೃದ್ಧಿ ನಿಗಮದವರು ಸಬ್‌ಮರ್ಸಿಬಲ್ ಪಂಪು ಸೆಟ್ಟುಗಳನ್ನು ಖರೀದಿಸುತ್ತಿರುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ, ಈ ನಿಗಮದ ಮೂಲಕ ಎಸ್‌ಸಿ: ಎಸ್‌ಟಿ ಕಾರ್ಪೊರೇಷನ್‌ಗೆ ಸಬ್‌ಮರ್ಸಿಬಲ್ ಪಂಪುಸೆಟ್ಟುಗಳನ್ನು ಖರೀದಿ ಮಾಡುವುದಕ್ಕೆ ಹೊರಟಿದ್ದಾರೆ. ಈ ಸರಕುಗಳನ್ನು ಖರೀದಿ ಮಾಡುವ ಸಲುವಾಗಿ ಈಗಾಗಲೇ 6 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಈ ಸದನದ ಅಧಿವೇಶನ ಮುಗಿದ ಮೇಲೆ 9 ಕೋಟಿ ರೂಪಾಯಿ ಬೆಲೆಯ ಸರಕುಗಳನ್ನು ಖರೀದಿ ಮಾಡಬೇಕೆಂದು ನಿರ್ಧರಿಸಿದ್ದಾರೆ. ಸರ್ಕಾರದ ನೀತಿ ಪ್ರಕಾರ ಕರ್ನಾಟಕ ಸಣ್ಣ ಕೈಗಾರಿಕೆ ಮಾರುಕಟ್ಟೆ ನಿಗಮದ ಮೂಲಕ ಪರ್‌ಚೇಸ್ ಮಾಡುವುದಕ್ಕೆ, ವ್ಯಾಪಾರ ಮಾಡುವುದಕ್ಕೆ ಯಾವುದೇ ಅಧಿಕಾರ ಇಲ್ಲ. ಅಂಥದ್ದರಲ್ಲಿ ಈ ಎಸ್.ಸಿ: ಎಸ್‌ಟಿ ಕಾರ್ಪೋರೇಷನ್‌ನವರು ಸರ್ಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿ ಯಾರನ್ನೂ ಸಹ ಟೆಂಡರಿಗೆ ಕರೆಯದೆ ಅಲ್ಲಿಯ ಮ್ಯಾನೇಜರ್ ಆಗಿರತಕ್ಕಂಥವರು, ವ್ಯವಸ್ಥಾಪಕ ನಿರ್ದೇಶಕರಾಗಿರತಕ್ಕಂಥವರು ಕೋಟ್ಯಾಂತರ ರೂಪಾಯಿಗಳ ಸರಕುಗಳನ್ನು ಕೊಂಡುಕೊಳ್ಳುವುದಕ್ಕೆ ನಿರ್ಧರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಗಮನಕ್ಕೆ ಬಂದಿದ್ದರೆ ಪರ್‌ಚೇಸ್ ಮಾಡುವುದನ್ನು ತಡೆಹಿಡಿದಿದ್ದೀರಾ? ಈಗಾಗಲೇ ನಿಮ್ಮ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರು ಒಂದು

ಪತ್ರವನ್ನು ಬರೆದಿದ್ದಾರೆ. ''ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಧೀನದಲ್ಲಿ ಬರುವ ಕರ್ನಾಟಕ ಸಣ್ಣ ಕೈಗಾರಿಕೆ ಮಾರುಕಟ್ಟೆ ನಿಗಮ ಸರಕು ಖರೀದಿ ಇಲಾಖೆ ಹಾಗೂ ಜಿಲ್ಲಾ ಸರಬರಾಜು ಮತ್ತು ಮಾರುಕಟ್ಟೆ ಸಹಕಾರ ಸಂಘಗಳು ಸರ್ಕಾರಿ ಇಲಾಖೆಗಳು ಕೊಳ್ಳುವ ವಸ್ತುಗಳ ಮೇಲೆ ದರ ನಿಗದಿಪಡಿಸುವ ಕ್ರಿಯೆಗೆ ಒಳಪಡುತ್ತದೆ. ಮೇಲೆ ತಿಳಿಸಿದ ಸಂಸ್ಥೆಯಲ್ಲಿ ಕೆಲವೊಂದು ವಸ್ತುಗಳ ವಿಷಯ..'' ಕಾರ್ಪೊರೇಷನ್‌ನವರು ಸರಕುಗಳನ್ನು ಕೊಳ್ಳಬಾರದೆಂದು ಸರ್ಕಾರ ಆದೇಶ ಇದೆ. ಆದರೂ ಸರಕುಗಳನ್ನು ಕೊಂಡುಕೊಳ್ಳುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಕಾರಣ ಯಾರು? ಇದು ನಿಜವೇ ಅಥವಾ ಇಲ್ಲವೇ, ನಿಜವಾಗಿದ್ದರೆ ಅದನ್ನು ತಡೆಹಿಡಿದಿದ್ದೀರಾ ಎಂಬುದರ ಬಗ್ಗೆ ಈ ಸದನದಲ್ಲಿ ಬೆಳಕು ಚೆಲ್ಲಬೇಕು.

ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಒಂದು ನಿಗಮದಿಂದ ಆರ್ಡರ್ ಬಂದಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ಎಸ್‌ಪಿಡಿ ರೇಟ್ ಫಿಕ್ಸ್ ಆಗಿಲ್ಲ. ಅದಕ್ಕೆ ತಡೆಯಾಜ್ಞೆ ಕೊಟ್ಟಿದ್ದೇನೆ.

(ಊ) ಚಾಮರಾಜನಗರದಲ್ಲಿನ ಪುಣಜೂರು ರಸ್ತೆಯ ದುರಸ್ತಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಪುಣಜೂರು ರಸ್ತೆಯನ್ನು ಸರಿಪಡಿಸಿ ಎಂದು ನಿರಂತರವಾಗಿ ಮಾನ್ಯ ಲೋಕೋಪಯೋಗಿ ಸಚಿವರನ್ನು ಒತ್ತಾಯ ಮಾಡುತ್ತಲೇ ಇದ್ದೇನೆ.

ಉಪಾಧ್ಯಕ್ಷರು: ನೀವು ನೋಟೀಸ್ ಕೊಡದೆಯೇ ಯಾವುದೋ ವಿಚಾರವನ್ನು ಪ್ರಸ್ತಾಪ ಮಾಡಿದರೆ ಹೇಗೆ? ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದು ಹೇಗೆ?

ಶ್ರೀ ವಾಟಾಳ್ ನಾಗರಾಜ್: ನಾನು ನೋಟೀಸನ್ನು ಕೊಟ್ಟಿದ್ದೇನೆ. ಮಾನ್ಯ ಅಧ್ಯಕ್ಷರಿಗೆ ತಿಳಿಸಿದ್ದೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರದಲ್ಲಿನ ಪುಣಜೂರು ರಸ್ತೆ ಬಗ್ಗೆ ಗುತ್ತಿಗೆದಾರರನ್ನು ಕರೆಸಿ ಸಭೆಯನ್ನು ಮಾಡಿ ತೀರ್ಮಾನವನ್ನು ಕೈಗೊಂಡಿದ್ದೇವೆ. ನವೆಂಬರ್ ತಿಂಗಳ ಒಳಗಾಗಿ ಆ ಗುತ್ತಿಗೆದಾರರು ಸರ್ಕಾರಕ್ಕೆ ಕೊಡಬೇಕಾದ ಪ್ರೋಗ್ರೆಸ್‌ನ್ನು ಕೊಡದೇ ಇದ್ದರೆ ಕ್ಯಾನ್ಸಲ್ ಮಾಡುತ್ತೇವೆಂದು ಈಗಾಗಲೇ ನೋಟೀಸನ್ನು ಕೊಟ್ಟಾಗಿದೆ. ಮಾನ್ಯ ಸದಸ್ಯರ ಗಮನಕ್ಕೆ ಈ ವಿಚಾರವನ್ನು ನಾನು ತಂದಿದ್ದರೂ ಸಹ ಅವರು ಪುನಃ ಪುನಃ ಒತ್ತಾಯ ಮಾಡುತ್ತಿರುವುದು ಏಕೆ ಎಂದು ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನಾನು ಈ ರಸ್ತೆಯನ್ನು ಸರಿಪಡಿಸಬೇಕೆಂದು ಒತ್ತಾಯ ಮಾಡಿದ್ದು ಆಯಿತು. ನಾನು ಮಾನ್ಯ ಮಂತ್ರಿಗಳ ಬಗ್ಗೆ